ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಡಾ || ವಿನೀತ್ ಕೊಠಾರಿ

ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿರುದ್ಧ ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುಚ್ಛಕ್ತಿ ಪ್ರಸರಣ ಕಂಪನಿ ನಿಯಮಿತ ಮತ್ತು ಇತರರು

ರಿಟ್ ಅರ್ಜಿಸಂಖ್ಯೆ: 47730/2016 (ಜಿಎಂ-ಕೆಇಬಿ), ದಿನಾಂಕ 5 ನೇ ಸೆಪ್ಟೆಂಬರ್, 2017

ತೀರ್ಪು

ನ್ಯಾಯಮೂರ್ತಿ ಡಾ || ವಿನೀತ್ ಕೊಠಾರಿ:

ಅರ್ಜಿದಾರ ಬಿಬಿಎಂಪಿ ಯು ದಿನಾಂಕ 9.4.2015 ರಂದು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು (ಇಲ್ಲಿ ಇನ್ನು ಮುಂದೆ ' ಕೆಇಆರ್ಸಿ ' ಎಂದು ಉಲ್ಲೇಖಿಸಲಾಗಿದೆ) ಹೊರಡಿಸಿದ ಆದೇಶ ಅನುಬಂಧ-ಕೆ ಯಲ್ಲಿ ಲಗತ್ತಿಸಲಾದ ಆದೇಶದಿಂದ ಬಾಧಿತವಾದುದರಿಂದ ಈ ಅರ್ಜಿಯನ್ನು ದಾಖಲಿಸಿದೆ.ಗ್ರಾಹಕ ಸಂಘಗಳಾದಂತಹ ವಿದ್ಯುತ್ ಗ್ರಾಹಕರ ಹಿತರಕ್ಷಣೆ ವೇದಿಕೆ ಮತ್ತು ಕರ್ನಾಟಕ ರಾಜ್ಯ ಪರವಾನಿಗೆ ಹೊಂದಿರುವ ವಿದ್ಯುಚ್ಛಕ್ತಿ ಗುತ್ತಿಗೆದಾರ ಸಂಘವು ದಾಖಲಿಸಿದ ದೂರುಸಂಖ್ಯೆ: 1/2015 ರ ಮೇಲೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ನೀಡಿದ ಆದೇಶದಲ್ಲಿನ ಪ್ಯಾರಾ (ಎನ್) ನಲ್ಲಿ ಪ್ರತ್ಯರ್ಜಿದಾರರ ಕಂಪನಿಗಳಾದಂತಹ ಬೆಸ್ಕಾಂ, ಸೆಸ್ಕಾಂ, ಮುಂತಾದ ಸಂಸ್ಥೆಗಳಿಂದ ಬಿಬಿಎಂಪಿಯಂಥ ಪೌರ ನಿಕಾಯಗಳಿಂದ ಹೊರಡಿಸುವ " ಅಧಿಭೋಗ ಪ್ರಮಾಣಪತ್ರವನ್ನು ಆ ಸಂಸ್ಥೆಗಳ ಆವರಣಗಳ ಅಧಿಭೋಗವನ್ನು ರುಜುವಾತು ಪಡಿಸುವುದಕ್ಕೆ ಗ್ರಾಹಕರನ್ನು 196 ಒತ್ತಾಯಪಡಿಸತಕ್ಕದ್ದಲ್ಲ ಎಂಬ ಆದೇಶದಿಂದ ಬಾಧಿತವಾಗಿರುವ ಬಿಬಿಎಂಪಿಯು ಈ ಅರ್ಜಿಯನ್ನು ದಾಖಲಿಸಿದೆ.

2. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ದಿನಾಂಕ 09.04.2015 ರಂದು ಹೊರಡಿಸಿದ ಸದರಿ ಆದೇಶದ ಸುಸಂಗತ ಪ್ಯಾರಾವು ಈ ಕೆಳಗಿನಂತಿದೆ:

" (ಎನ್) ವಿದ್ಯುಚ್ಛಕ್ತಿ ಎಲ್ಲ ವ್ಯಕ್ತಿಗಳು ಅತ್ಯವಶ್ಯವಾಗಿ ಬಳಸುವ ವಸ್ತುವಾಗಿದೆ.ಅಧಿನಿಯಮದ 43 ನೇ ಪ್ರಕರಣದಲ್ಲಿ ಯಾವುದೇ ಆವರಣಗಳ ಮಾಲೀಕ ಅಥವಾ ಅಧಿಭೋಗದಾರರು ಸಲ್ಲಿಸಿದ ಅರ್ಜಿಯ ಮೇಲೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಹ ಂ ಚಿಕೆಯ ಲೈಸೆನ್ಸ್ದಾರನ ಕಡೆಯಿ ಂ ದ ಸಾರ್ವತ್ರಿಕ ಹೊಣೆಗಾರಿಕೆಯನ್ನು ನಿರ್ದೇಶಿಸಲಾಗಿದೆ.ಅಧಿನಿಯಮದ ಅಡಿಯಲ್ಲಿ ಆಯೋಗಕ್ಕೆ ಗ್ರಾಹಕರಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡುವ ಸಂಬಂಧದಲ್ಲಿ ಯುಕ್ತವಾದ ವಿನಿಯಮಗಳನ್ನು, ಅಂಥ ಷರತ್ತುಗಳನ್ನು ಮತ್ತು ನಿಬಂಧನೆಗಳನ್ನು ರಚಿಸುವುದಕ್ಕೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.ಅದರಂತೆ ಆಯೋಗವು ಗ್ರಾಹಕರಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡುವುದಕ್ಕಾಗಿ ನಿರ್ದಿಷ್ಟ ಪಡಿಸಿದ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಯುಕ್ತವಾಗಿ ರಚಿಸಿದೆ ಮತ್ತು ಸರಬರಾಜು ಷರತ್ತುಗಳನ್ನು (ಸಿಒಎಸ್) ಅನುಮೋದಿಸಿದೆ.ಈ ಸರಬರಾಜು ಷರತ್ತುಗಳು ಶಾಸನದಷ್ಟೇ ಸಮರ್ಥವಾಗಿರುತ್ತದೆ ಮತ್ತು ಪರಿಣಾಮತ್ವವನ್ನು ಹೊಂದಿರುತ್ತವೆ.ಸರಬರಾಜು ಷರತ್ತುಗಳ ಯಾವುದೇ ಉಪಬಂಧವನ್ನು ತಿದ್ದುಪಡಿ ಮಾಡುವ ಮತ್ತು ಮಾರ್ಪಾಡು ಮಾಡುವ ಹಕ್ಕು ಆಯೋಗ ಮಾತ್ರವೇ ಹೊಂದಿರುತ್ತದೆ.ಸರಬರಾಜು ಷರತ್ತುಗಳ ನಿಬಂಧನೆಯ ಅಡಿಯಲ್ಲಿ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವುದಕ್ಕೆ ಹಕ್ಕುಳ್ಳಂತಹ ಎಲ್ಲ ವ್ಯಕ್ತಿಗಳಿಗೆ ಯಾವುದೇ ಅಪ್ರಸ್ತುತ ಕಾರಣಗಳಿಗಾಗಿ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವುದಕ್ಕೆ ನಿರಾಕರಿಸಬಾರದು.ಆದುದರಿಂದ ವಿದ್ಯುಚ್ಛಕ್ತಿಯ

ಸರಬರಾಜಿಗಾಗಿ ಹಕ್ಕುಳ್ಳಂತಹ ವ್ಯಕ್ತಿಯು ಯಾರೇ ವ್ಯಕ್ತಿಯ ಆವರಣಗಳ ಕಟ್ಟಡದ ಅಧಿಭೋಗವನ್ನು ಹೊಂದಲು ಪುರಸಭೆ ಅಧಿನಿಯಮ ಮತ್ತು ಉಪವಿಧಿಗಳ ಉಪಬಂಧವು ಅಡ್ಡ ಇರಬಾರದು.ಆ ವ್ಯಕ್ತಿಯ ಸರಬರಾಜು ಷರತ್ತಿನ ಉಪಬಂಧಗಳನ್ನು ತೃಪ್ತಿಕರವಾಗಿ ನೆರವೇರಿಸಬೇಕಾಗುತ್ತದೆ.ಈ ನಿಟ್ಟಿನಲ್ಲಿ ಎಲ್ಲ ವ್ಯಕ್ತಿಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವುದಕ್ಕೆ ಸಾರ್ವತ್ರಿಕ ಹೊಣೆಗಾರಿಕೆಯ ಉದ್ದೇಶವನ್ನು ಅವನು ನೆರವೇರಿಸಬೇಕಾಗುತ್ತದೆ.ಹಾಗಾಗಿ, ಅಧಿಭೋಗದ ಕಟ್ಟಡಕ್ಕೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲು ಯಾರೇ ಅಧಿಭೋಗವನ್ನು ಪುರಸಭೆ ಅಧಿನಿಯಮ ಸೇವಾ ನೀಡಿಕೆಯ ಕಾರಣವಾಗಿ ಮತ್ತು ಯಾವುದೇ ಅಕ್ರಮತೆಯ ದುಷ್ಪರ ರಣೆಗೆ ಅವಕಾಶ ನೀಡಬಾರದು ಎಂಬುದು ಇದರ ಮುಖ್ಯ ಉದ್ದೇಶವಾಗಿದೆ.ಮೇಲಿನ ಕಾರಣಗಳಿಗಾಗಿ ವಿಷಯದ ಸಂಖ್ಯೆ ( 2) ರ ಉತ್ತರ ಸಕಾರಾತ್ಮಕವಾಗಿದೆ.

3. ಮೇಲೆ ಹೇಳಲಾದ ದೂರುಸಂಖ್ಯೆ: 1/2015 ರಲ್ಲಿ ಸದರಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಮುಂದೆ ಅರ್ಜಿದಾರ ಬಿಬಿಎಂಪಿಯು ಪಕ್ಷಕಾರ ಆಗಿರುವುದಿಲ್ಲ.ಹಾಗಿದ್ದರೂ, ಈ ನ್ಯಾಯಾಲಯದ ಮುಂದೆ ಸದರಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಆದೇಶವನ್ನು ಪ್ರಶ್ನೆ ಮಾಡಿ ಅರ್ಜಿದಾರ ಬಿಬಿಎಂಪಿ ಅರ್ಜಿಯನ್ನು ದಾಖಲಿಸಿದೆ.ಬಿಬಿಎಂಪಿಯು ತನ್ನ ಅರ್ಜಿಯಲ್ಲಿ ಈ ಕೆಳಗಿನಂತೆ ಪ್ರಾರ್ಥಿಸಿದೆ:

" ಈ ಕಾರಣದಿಂದ, ಅರ್ಜಿದಾರರು ಈ ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸಿರುವರು:

(i) ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು ಇವರು ದೂರುಸಂಖ್ಯೆ: 112015 ರ ಮೇಲೆ ದಿನಾಂಕ 9.4.2015 ರಂದು ಮಾಡಿದ ಆದೇಶವನ್ನು, ಅನುಬಂಧ-ಕೆಯಲ್ಲಿ, ಸದರಿ ಆದೇಶವನ್ನು ಹಾಜರುಪಡಿಸಲಾಗಿದೆ.ಈ ಆದೇಶವನ್ನು ಸರ್ಷಿಯೋರರಿ ರಿಟ್ ಅಥವಾ ಯಾವುದೇ ಇತರ ರಿಟ್ ವಿಷಯವೆಂಬಂತೆ ಪರಿಗಣಿಸಿ ರದ್ದುಗೊಳಿಸಬೇಕೆಂದು ಮತ್ತು ಪ್ರಶ್ನಿತ ಆದೇಶವನ್ನು ವಜಾ ಮಾಡಿದ ನಂತರದಲ್ಲಿ ಪರ್ಯಾಯವಾಗಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಈ ವಿಷಯದ ಸಂಬಂಧದಲ್ಲಿ ಅರ್ಜಿದಾರರ ಅಹವಾಲನ್ನು ಆಲಿಸಿದ ನಂತರ ಹೊಸದಾದ ಆದೇಶವನ್ನು ಹೊರಡಿಸಲು ನಿರ್ದೇಶಿಸಬೇಕೆಂದು ಪ್ರಾರ್ಥಿಸಿರುವರು.

(ii) ಮೊಕದ್ದಮೆಯ ಸಂಗತಿಗಳು ಮತ್ತು ಸನ್ನಿವೇಶಗಳನ್ನು ಮಾನ್ಯ ಮಾಡುವುದಕ್ಕೆ ಅರ್ಹವೆಂದು ಭಾವಿಸಬಹುದಾದಂತಹ ಅಂಥ ಇತರ ಆದೇಶಗಳನ್ನು ಅಥವಾ ನಿರ್ದೇಶನಗಳನ್ನು ಪರಿಗಣಿಸಲು ನಿರ್ದೇಶಿಸಬೇಕೆಂದು ಈ ಘನ ನ್ಯಾಯಾಲಯವನ್ನು ಪ್ರಾರ್ಥಿಸಿರುವರು.99

4. ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಶ್ರೀ ಬಿ.ಎಸ್. ಗೌತಮ್ ಅವರು ರಾಜ್ಯ ಸರ್ಕಾರವು ಹೊರಡಿಸಿದ ಸುತ್ತೋಲೆ ಅನುಬಂಧ- ಎ ಯಲ್ಲಿರುವಂತೆ ದಿನಾಂಕ 18.07.2014 ರ ಸುತ್ತೋಲೆಯಲ್ಲಿ CC ಅನುಭೋಗ ಪ್ರಮಾಣಪತ್ರ'ದ ನಮೂನೆಯಲ್ಲಿ ಎಲ್ಲಾ ಅಧಿಭೋಗದಾರರು ರುಜುವಾತು ಪಡಿಸುವುದು ಕಡ್ಡಾಯವಾಗಿದೆ ಎಂದು ಉಲ್ಲೇಖಿಸಿದೆ.ಈ ಕಾರಣದಿಂದ ಬಿಬಿಎಂಪಿಗೆ ಪ್ರಸ್ತುತ ಅರ್ಜಿಯನ್ನು ದಾಖಲಿಸುವಂತಹ ಸಂದರ್ಭವು ಉಂಟಾಗಿದೆ.ರಾಜ್ಯ ಸರ್ಕಾರವು ದಿನಾಂಕ 18.07.2014 ರಂದು ಸದರಿ ಸುತ್ತೋಲೆಯನ್ನು ಹೊರಡಿಸಿದೆ ಅದರ ಸುಸಂಗತ ಭಾಗವನ್ನು ಪರಾಮರ್ಶಿಸುವ ಸಲುವಾಗಿ ಈ ಕೆಳಗೆ ಉಲ್ಲೇಖಿಸಲಾಗಿದೆ:

"ಕರ್ನಾಟಕ ಸರ್ಕಾರ

ಸಂಖ್ಯೆ:ಯುಡಿಡಿ 556 ಎಂಡಿಪಿ 2013

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು,ದಿನಾಂಕ: 18.7.2014.

*ಸುತ್ತೋಲೆ*

ವಿಷಯ: ಅಕ್ರಮ ನಿರ್ಮಾಣವನ್ನು ಸಕ್ರಮಗೊಳಿಸುವ ಸಂಬಂಧದಲ್ಲಿ ಅಧಿನಿಯಮ ಮತ್ತು ನಿಯಮಗಳ ಪ್ರಕಾರದಂತೆ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು.

ಉಲ್ಲೇಖ: ಅಕ್ರಮ ನಿರ್ಮಾಣವನ್ನು ಸಕ್ರಮಗೊಳಿಸುವ ಸಂಬಂಧದಲ್ಲಿ ಈಗಾಗಲೇ ಇರುವ ಅಧಿನಿಯಮಗಳು ಮತ್ತು ನಿಯಮಗಳನ್ನು ಮರು ಪರಿಶೀಲಿಸುವ ಸಂಬಂಧದಲ್ಲಿ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಕೊಠಡಿಯಲ್ಲಿ ದಿನಾಂಕ 27.05.2014 ರಂದು ಆಯೋಜಿಸಲಾದ ಸಭೆಯಲ್ಲಿ ನಡೆದ ಕಾರ್ಯ-ಕಲಾಪ ವ್ಯವಹರಣೆಗಳು.

ಮೇಲೆ ಉಲ್ಲೇಖಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ, ಮತ್ತು ಕರ್ನಾಟಕ ಸರ್ಕಾರವು ಅಕ್ರಮ ಸಕ್ರಮ ಕಾರ್ಯಕ್ರಮವನ್ನು ಪ್ರಾರಂಭಿಸುವ ಮುಂಚೆ ತೆಗೆದುಕೊಳ್ಳಬಹುದಾದ ಮುನ್ನೆಚ್ಚರಿಕೆಯ ಕ್ರಮಗಳ ಉದ್ದೇಶಕ್ಕಾಗಿ ದಿನಾಂಕ 27.05.2014 ರಂದು ಮುಖ್ಯ ಕಾರ್ಯದರ್ಶಿಯವರ ಕೊಠಡಿಯಲ್ಲಿ ಆಯೋಜಿಸಲಾದ ಸಭೆಯಲ್ಲಿನ ಕಾರ್ಯಕಲಾಪಗಳ ವ್ಯವಹರಣೆಗೆ ಅನುಸಾರವಾಗಿ ಈ ಸುತ್ತೋಲೆಯನ್ನು ಹೊರಡಿಸಲಾಗಿದೆ.ಈ ಸುತ್ತೋಲೆಯೊಂದಿಗೆ ಸಭೆಯ ಕಾರ್ಯಕಲಾಪ ವ್ಯವಹರಣೆಯನ್ನು ಲಗತ್ತಿಸಲಾಗಿದೆ.

ಸಭೆಯಲ್ಲಿ, ಅಕ್ರಮ-ಸಕ್ರಮ ಕಾರ್ಯಕ್ರಮದಡಿಯಲ್ಲಿ ಅಕ್ರಮ ರಚನೆಗಳನ್ನು ಮತ್ತು ಉಲ್ಲಂಘನೆಗಳನ್ನು ಸಕ್ರಮಗೊಳಿಸುವ ಅಡಿಯಲ್ಲಿ ಯಾವ ಸ್ವರೂಪದ ಉಲ್ಲಂಘನೆಯನ್ನು ಉಪಬಂಧಿಸಬೇಕು ಮತ್ತು ಅನುಮೋದಿತ ನಕ್ಷೆಯ ಆಧಾರಿತವಾಗಿ ರಚಿತವಾದ ಯಾವ ಕಟ್ಟಡಗಳ ಮತ್ತು ನಿರ್ದಿಷ್ಟ ಯಾವ ಅಳತೆಯ ನಿವೇಶನಗಳ ಉಲ್ಲಂಘನೆಯನ್ನು ಪರಿಗಣಿಸಬೇಕೆಂದು ಪ್ರಮುಖವಾಗಿ ಚರ್ಚೆಯಾದ ವಿಷಯವಾಗಿದೆ.

ಅನುಮೋದಿತ ನಕ್ಷೆಯು ಲಭ್ಯವಿರದಿದ್ದ ಪಕ್ಷದಲ್ಲಿ ಯಾವ ಕ್ರಮವನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆಯೂ ಸಹ ಚರ್ಚಿಸಲಾಯಿತು.ಅದರಂತೆ ಅಂಥ ಉಲ್ಲಂಘನೆಯ ಕಾರಣಕ್ಕಾಗಿ ಅದರ ಹೊಣೆಗಾರಿಕೆ ಹೊಂದಿರುವಂತಹ ಅಧಿಕಾರಿಗಳ ವಿರುದ್ಧ ಯುಕ್ತ ನಿರ್ದೇಶನಗಳನ್ನು ಹೊರಡಿಸುವುದಕ್ಕೆ ನಿರ್ದೇಶಿಸಲಾಯಿತು.ಈ ಸಂಬಂಧದಲ್ಲಿ ಚರ್ಚೆ ನಡೆದ ನಂತರದಲ್ಲಿ ಭವಿಷ್ಯದಲ್ಲಿ ಈ ರೀತಿಯ ಉಲ್ಲಂಘನೆಯನ್ನು ನಿಯಂತ್ರಿಸುವುದಕ್ಕೆ ಉಲ್ಲಂಘನೆಯ ಕಟ್ಟಡಗಳಿಗೆ ನೀರು ಸರಬರಾಜು ಮತ್ತು ವಿದ್ಯುಚ್ಛಕ್ತಿ ಸರಬರಾಜನ್ನು ನಿಲ್ಲಿಸುವಂತಹ ಕ್ರಮವನ್ನು ಚರ್ಚಿಸಲಾಯಿತು.ಕಟ್ಟಡವನ್ನು ನಿರ್ಮಾಣ ಮಾಡುವ ಮುಂಚೆ ಬಿಬಿಎಂಪಿ ಒಳಗೊಂಡಂತೆ ಸ್ಥಳೀಯ ನಿಕಾಯಗಳ ಮುಖಾಂತರ ಅಧಿಭೋಗ ಪ್ರಮಾಣಪತ್ರ ಜಾರಿಯಾಗುವ ಮುಂಚೆಯೇ ಅಂಥ ಉಲ್ಲಂಘನೆಯನ್ನು

ನಿಯಂತ್ರಿಸುವ ದೃಷ್ಟಿಯಲ್ಲಿಟ್ಟುಕೊಂಡು ಬಿಬಿಎಂಪಿಯು ಅಧಿಭೋಗ ಪ್ರಮಾಣಪತ್ರವನ್ನು ಹೊರಡಿಸಬೇಕೆಂದು ನಿರ್ದೇಶಿಸಬೇಕೆಂದು ಸಭೆಯಲ್ಲಿ ಚರ್ಚಿಸಲಾಯಿತು.

ಈ ಸಂಬಂಧದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಥವಾ ಬಿಬಿಎಂಪಿ ಮುಖಾಂತರ ನಿರಾಕ್ಷೇಪಣಾ ಪ್ರಮಾಣಪತ್ರ/ಅಧಿಭೋಗ ಪ್ರಮಾಣಪತ್ರ ಪಡೆದ ನಂತರ ಮಾತ್ರವೇ ನೀರು ಮತ್ತು ವಿದ್ಯುಚ್ಛಕ್ತಿ ಸಂಪರ್ಕಗಳನ್ನು ಒದಗಿಸುವುದಕ್ಕೆ ಸಭೆಯಲ್ಲಿ ನಿರ್ದೇಶಿಸಲಾಯಿತು.

ಈ ಪ್ರಕಾರದಂತೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ಕಂಪನಿ ನಿಯಮಿತ (ಕೆಪಿಟಿಸಿಎಲ್) ಪ್ರಾಧಿಕಾರಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆಯಿಂದ ಅಧಿಭೋಗ ಪ್ರಮಾಣಪತ್ರ/ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಪಡೆದುಕೊಳ್ಳದ ಹೊರತು ಹೊಸದಾದ ನೀರು ಪೂರೈಕೆ ಮತ್ತು ವಿದ್ಯುಚ್ಛಕ್ತಿ ಪೂರೈಕೆ ಸ ೦ ಪರ್ಕವನ್ನು-ಒದಗಿಸಬಾರದು.ಸುತ್ತೋಲೆ ಹೊರಡಿಸಿದ ನಂತರದಲ್ಲೂ ನಿರಾಕ್ಷೇಪಣಾ ಪ್ರಮಾಣಪತ್ರ/ಅಧಿಭೋಗ ಪ್ರಮಾಣಪತ್ರದ ಹೊರತಾಗಿ ನೀರು ಸರಬರಾಜು ಮತ್ತು ವಿದ್ಯುಚ್ಛಕ್ತಿ ಸರಬರಾಜು ಸಂಪರ್ಕವನ್ನು ಒದಗಿಸಿದಂತಹ ಮೊಕದ್ದಮೆಗಳೇನಾದರೂ ಕಂಡು ಬಂದ ಪಕ್ಷದಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಥವಾ ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ಕಂಪನಿ ನಿಯಮಿತದ ಸಂಬಂಧಪಟ್ಟ ಕಾರ್ಯ ನಿರ್ವಾಹಕ ಇಂಜಿನಿಯರ್ ಮೇಲೆ ಕ್ರಮ ಜರುಗಿಸಬೇಕೆ ೦ ದು ಸಹ ಸಭೆಯಲ್ಲಿ ನಿರ್ದೇಶಿಸಲಾಯಿತು.

ರಾಜ್ಯದಲ್ಲಿ ಮೊದಲ ಬಾರಿಗೆ ಬಿಬಿಎಂಪಿ ಮತ್ತು ಬಿಡಿಎಯ ಅಧಿಕಾರ ವ್ಯಾಪ್ತಿಯ ಪ್ರದೇಶದೊಳಗೆ ಮೇಲಿನ ನಿರ್ದೇಶನಗಳನ್ನು ಪ್ರಾರಂಭಿಸುವುದಕ್ಕೆ ಉದ್ದೇಶಿಸಲಾಗಿದೆ.ಹಾಗಾಗಿ, ಆಯುಕ್ತರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ಕಂಪನಿ ನಿಯಮಿತ ಇವರು ಮೇಲಿನ ಸೂಚನೆಗಳನ್ನು/ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕೆಂದು ಈ ಮೂಲಕ ನಿರ್ದೇಶಿಸಲಾಗಿದೆ.ತದನುಸಾರವಾಗಿ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರಿಗೆ ಈ ಸುತ್ತೋಲೆಯ ಅನುಸಾರವಾಗಿ ಉಲ್ಲಂಘನೆ ಮಾಡದಿರುವ ಆ ಯಾವುದೇ ಕಟ್ಟಡಗಳಿಗೆ ಮಾತ್ರವೇ ಅಧಿಭೋಗ ಪ್ರಮಾಣಪತ್ರವನ್ನು ಹೊರಡಿಸಬೇಕೆಂದು ಸಹ ಈ ಮೂಲಕ ನಿರ್ದೇಶಿಸಲಾಗಿದೆ.ಈ ಸುತ್ತೋಲೆ ಹೊರಡಿಸಿದ ನಂತರದಲ್ಲೂ ಉಲ್ಲಂಘನೆಗಳೇನಾದರೂ ಕಂಡು ಬಂದಲ್ಲಿ, ಅಂಥ ಮೊಕದ್ದಮೆಗಳ ಸಂಬಂಧದಲ್ಲಿ, ಸಂಬಂಧಪಟ್ಟ ಕಾರ್ಯ ನಿರ್ವಾಹಕ ಎ ೦ ಜಿನಿಯರ್ ಅವರೊಬ್ಬರೇ ಮಾತ್ರವೇ ಅದಕ್ಕೆ ಹೊಣೆಗಾರರಾಗಿರುತ್ತಾರೆ.

*ಸಹಿ/*

*ಟಿ.ಎಂ. ವಾಸುದೇವರಾವ್*

*ಸರ್ಕಾರದ ಅಧೀನ ಕಾರ್ಯದರ್ಶಿ*

*ನಗರಾಭಿವೃದ್ಧಿ ಇಲಾಖೆ "*

5. ಮಾನ್ಯ ನ್ಯಾಯವಾದಿಗಳ ವಾದಗಳನ್ನು ಆಲಿಸಿದ ಈ ನ್ಯಾಯಾಲಯಕ್ಕೆ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಸರಬರಾಜು ನಿಯಂತ್ರಿಸುವುದಕ್ಕಾಗಿ ಸಂಬಂಧಪಟ್ಟ ಬಿಬಿಎಂಪಿ ಒಳಗೊಂಡಂತೆ ಪೌರ ನಿಕಾಯಗಳು ಹೊರಡಿಸುವ " ಅಧಿಭೋಗ ಪ್ರಮಾಣ ಪತ್ರ'ದ ನಮೂನೆಯು ಸರಬರಾಜು ಷರತ್ತುಗಳ ವಿನಿಯಮನಗಳು ಜಾರಿಯಲ್ಲಿರುವ ಸಂದರ್ಭದಲ್ಲಿ ಅಧಿಭೋಗವನ್ನು ರುಜುವಾತುಪಡಿಸುವ ಅಗತ್ಯವಿರುವುದಿಲ್ಲ ಎಂಬುದನ್ನು ಈ ನ್ಯಾಯಾಲಯವು ಮನದಟ್ಟು ಮಾಡಿಕೊಂಡಿದೆ.ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಒಂದು ಸ್ವಾಯತ್ತ ಪ್ರಾಧಿಕಾರವಾಗಿರುತ್ತವೆ ಮತ್ತು ಯಾರೇ ಗ್ರಾಹಕ ಅಥವಾ ಅರ್ಜಿದಾರ ವಿದ್ಯುಚ್ಛಕ್ತಿ ಅಧಿನಿಯಮ, 2003 ರ 43 ನೇ ಪ್ರಕರಣವನ್ನು ಓದಿಕೊಳ್ಳುವುದರೊಂದಿಗೆ ಸರಬರಾಜು ಷರತ್ತುಗಳಲ್ಲಿ (ಸಿಓಎಸ್) ನಿಗದಿಪಡಿಸಿದ ರೀತಿಯಲ್ಲಿ ವಿದ್ಯುಚ್ಛಕ್ತಿ ಸಂಪರ್ಕವನ್ನು ಕೋರಲು ಆವರಣಗಳ ಒಡೆತನ ಮತ್ತು ಅಧಿಭೋಗವನ್ನು ರುಜುವಾತುಪಡಿಸುವ ಅಗತ್ಯವಿರುವುದಿಲ್ಲ ಎಂದು ಅದು ಪ್ರಶ್ನಿತ ಆದೇಶವನ್ನು ಹೊರಡಿಸಿರುವುದು ಸರಿಯಾದುದಾಗಿದೆ.ಸಂಬಂಧಿಸಿದ ಉಪವಿಧಿಗಳ ಅಥವಾ ಸರಬರಾಜು ಷರತ್ತುಗಳ ಯಾವುದೇ ತಿದ್ದುಪಡಿಯ ಅನುಪಸ್ಥಿತಿಯಲ್ಲಿ, ಸರ್ಕಾರವು ಈ ರೀತಿಯಲ್ಲಿ ಒತ್ತಾಯಪಡಿಸುವುದು ಸರಿಯಾದ ಕ್ರಮವಾಗಿರುವುದಿಲ್ಲ.ದಿನಾಂಕ 18.7.2014 ರ ಅನುಬಂಧ- ಎ ಯಲ್ಲಿರುವ ಪ್ರಶ್ನಿತ ಸುತ್ತೋಲೆಯಲ್ಲಿ " ಅಧಿಭೋಗ ಪ್ರಮಾಣಪತ್ರ " ವನ್ನು ಬಿಬಿಎಂಪಿ ಯಿಂದ ಡೆವಲಪರ್/ಬಿಲ್ಡರ್ ಅವರು ತೆಗೆದುಕೊಂಡಿದ್ದಲ್ಲಿ, ಬಹು ಮಹಡಿ ಕಟ್ಟಡಗಳಲ್ಲಿನ ಗ್ರಾಹಕರು/ಅರ್ಜಿದಾರರನ್ನು ವಿತರಣ ಕಂಪನಿಗಳನ್ನು " ಅಧಿಭೋಗ ಪ್ರಮಾಣಪತ್ರವನ್ನು ಹಾಜರುಪಡಿಸುವುದಕ್ಕೆ ಒತ್ತಾಯಪಡಿಸುವುದು ಸರಿಯಾದುದಲ್ಲ.ಗ್ರಾಹಕರು ಅಥವಾ ಅರ್ಜಿದಾರರು ಪ್ರತ್ಯೇಕ ಪ್ಲಾಟ್ ಮಾಲೀಕರು ಬಿಬಿಎಂಪಿಯಂತಹ ಪೌರ ನಿಕಾಯಗಳಿಂದ ಅಂಥ ಅಧಿಭೋಗ ಪ್ರಮಾಣಪತ್ರ ಪಡೆಯುವುದಕ್ಕೆ ಅವಕಾಶವೇ ಇರದಿರುವಾಗ ಅವರಿಂದ ಅಧಿಭೋಗ ಪ್ರಮಾಣಪತ್ರವನ್ನು ಅಪೇಕ್ಷಿಸುವುದು ಸರಿಯಾದ ಕ್ರಮವಾಗಿರುವುದಿಲ್ಲ.ಆದುದರಿಂದ ವಿದ್ಯುಚ್ಛಕ್ತಿ ಸಂಪರ್ಕವನ್ನು ಪಡೆಯುವುದಕ್ಕಾಗಿ ಷರತ್ತಿನಲ್ಲಿರುವಂತೆ 66 " ಅಧಿಭೋಗ ಪ್ರಮಾಣಪತ್ರ " 9 ಹಾಜರುಪಡಿಸುವುದಕ್ಕೆ ಅವರನ್ನು ಒತ್ತಾಯಿಸುವುದು ಅಕ್ರಮವಾಗಿರುತ್ತದೆ.

6. ರಾಜ್ಯ ವಿಧಾನ ಮಂಡಲವು ಸಂಬಂಧಪಟ್ಟ ನಿಯಮಗಳನ್ನು ಮತ್ತು ವಿನಿಯಮನಗಳನ್ನು ತಿದ್ದುಪಡಿ ಮಾಡುವುದಕ್ಕೆ ಸ್ವಾತಂತ್ರ್ಯವನ್ನು ಹೊಂದಿರುತ್ತದೆ.ಆದರೆ ಶಾಸನಗಳು ಎಲ್ಲಿಯವರೆವಿಗೂ ಹಾಗೆಯೇ ಇರುತ್ತವೋ ಅಲ್ಲಿಯವರೆಗೂ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಗ್ರಾಹಕ ಸಂಘವು ದಾಖಲಿಸಿದ ದೂರಿನ ಮೇಲೆ ಹೊರಡಿಸಿದ ಪ್ರಶ್ನಿತ ಆದೇಶದಲ್ಲಿ ಯಾವುದೇ ದೋಷ ಇರುವುದಿಲ್ಲ.

7. ಆದುದರಿಂದ ಅರ್ಜಿದಾರ-ಬಿಬಿಎಂಪಿಯೂ ದಾಖಲಿಸಿದ ಪ್ರಸ್ತುತ ರಿಟ್ ಅರ್ಜಿಯಲ್ಲಿ ಯಾವುದೇ ಗುಣಾರ್ಹತೆಯನ್ನು ಹೊಂದಿಲ್ಲವೆಂದು ತೀರ್ಮಾನಿಸಲಾಗಿದೆ ಮತ್ತು ಅರ್ಜಿಯೂ ವಜಾಗೊಳ್ಳಲು ಅರ್ಹವಾಗಿದೆ ಅದರಂತೆ ಅರ್ಜಿಯನ್ನು ವಜಾಗೊಳಿಸಲಾಗಿದೆ.ಯಾವುದೇ ವೆಚ್ಚ ಇರುವುದಿಲ್ಲ.